**"Azadi Ka Amrit Mahotsav"**

**INDIA@75**


**ಕೃಷಿ ವಿಶ್ವ ವಿದ್ಯಾನಿಲಯ**

**ಕೃಷಿ ಹವಾಮಾನ ಕ್ಷೇತ್ರ ವಿಭಾಗ (IMD)**

**ಜಿ.ಕೆ.ವಿ.ಕೆ., ಬೆಂಗಳೂರು–560065**


# * ಗ್ರಾಮೀಣ ಕೃಷಿ ಹವಾಮಾನ ಸೇವಾ ವರದಿ ಪತ್ರಿಕೆ *

**ದಿನಾಂಕ:** 22.06.2021

## ಬೆಂಗಳೂರು ನಗರ ಜಿಲ್ಲೆಗೆ ಸೀಮಿತವಾಗಿದೆ.

### ಕಳೆದ ಐದು ದಿನಗಳ ಹವಾಮಾನ ಸಾರಂಶ

| ನಿಯತಾಂಕಗಳು | 18.06.2021 | 19.06.2021 | 20.06.2021 | 21.06.2021 | 22.06.2021 |
|---|---|---|---|---|---|
| ಮಳೆ (ಮಿ ಮೀ) | 0 | 0 | 0 | 0 | 0 |
| ಗರಿಷ್ಠ ಉಷ್ಣಾಂಶ(ಡಿ.ಸೆ. ) | 26.2 | 27.2 | 28.0 | 29.0 | 30.0 |
| ಕನಿಷ್ಠ ಉಷ್ಣಾಂಶ (ಡಿ.ಸೆ. ) | 19.6 | 19.4 | 20.0 | 20.0 | 19.8 |
| ಮೋಡ ( ಪ್ರಮಾಣ) | 6 | 3 | 4 | 3 | 3 |
| ಆರ್ದ್ರತೆ 7.20 ಬೆ (ಶೇ) | 89 | 83 | 84 | 81 | 86 |
| ಆರ್ದ್ರತೆ 2.20 ಮ (ಶೇ) | 58 | 59 | 55 | 55 | -- |
| ಗಾಳಿಯ ವೇಗ (ಕಿ.ಮಿ/ಗಂಟೆಗೆ) | 10.6 | 5.4 | 5.3 | 4.3 | 8.0 |
| ಗಾಳಿಯ ದಿಕ್ಕು ( ಡಿಗ್ರಿ) | 270 | 270 | 270 | 270 | 230 |

### ಈ ವಾರದ ಹವಾಮಾನ ಮುನ್ಸೂಚನೆ (ಭಾರತೀಯ ಹವಾಮಾನ ಇಲಾಖೆ)

(ದಿನಾಂಕ 23–06–2021 ರಿಂದ 27–06–2021 ವರೆಗೆ)

| ನಿಯತಾಂಕಗಳು | 23.06.2021 | 24.06.2021 | 25.06.2021 | 26.06.2021 | 27.06.2021 |
|---|---|---|---|---|---|
| ಮಳೆ (ಮಿ ಮೀ) | 5 | 3 | 1 | 1 | 0 |
| ಗರಿಷ್ಠ ಉಷ್ಣಾಂಶ(ಡಿ.ಸೆ. ) | 30 | 30 | 28 | 29 | 29 |
| ಕನಿಷ್ಠ ಉಷ್ಣಾಂಶ (ಡಿ.ಸೆ. ) | 20 | 20 | 20 | 20 | 20 |
| ಮೋಡ ( ಪ್ರಮಾಣ) | 4 | 4 | 4 | 4 | 3 |
| ಆರ್ದ್ರತೆ 7.20 ಬೆ (ಶೇ) | 78 | 78 | 78 | 76 | 76 |
| ಆರ್ದ್ರತೆ 2.20 ಮ (ಶೇ) | 54 | 54 | 54 | 52 | 52 |
| ಗಾಳಿಯ ವೇಗ (ಕಿ.ಮಿ/ಗಂಟೆಗೆ) | 8 | 9 | 10 | 11 | 11 |
| ಗಾಳಿಯ ದಿಕ್ಕು ( ಡಿಗ್ರಿ) | 257 | 248 | 257 | 270 | 257 |

ಭಾರತೀಯ ಹವಾಮಾನ ಇಲಾಖೆಯ ಪ್ರಕಾರ ಮುಂದಿನ ನಾಲ್ಕೈದು ದಿನಗಳಲ್ಲಿ ಹಗುರದಿಂದ ಸಾದಾರಣ ಮಳೆ0ಯಾಗುವ ಸಾಧ್ಯತೆ ಇದೆ. ದಿನದ ಗರಿಷ್ಠ ಉಷ್ಣಾಂಶ **28.0-30.0$^{o}$C** ಮತ್ತು ಕನಿಷ್ಠ **20.0$^{o}$C** ಇರುವ ಸಾಧ್ಯತೆ ಇದೆ. ಬೆಳಿಗಿನ ಆರ್ದ್ರತೆ ಪ್ರಮಾಣ ಶೇ **76-78 %** ಇದ್ದು ಮಧ್ಯಾಹ್ನ **52-54 %** ಇರುವುದು ಮತ್ತು ಗಾಳಿಯು ಗಂಟೆಗೆ ಸರಾಸರಿ **8-11** ಕಿ.ಮೀ. ವೇಗದಲ್ಲಿ ಬೀಸುವ ಸ0ಭವವಿದೆ.

- ➢ ಆರಿದ್ರಾ ನಕ್ಷತ್ರದ ಮಳೆಯ ಕಾಲವು ಜೂನ್ ತಿಂಗಳ 22 ರಿಂದ ಜುಲೈ 05 ರ ವರೆಗೆ ಇರುತ್ತದೆ. ಈ ನಕ್ಷತ್ರದ ಪೂರ್ವ ಒಣ ವಲಯದ ಸರಾಸರಿ ಮಳೆಯು 20.0 ಮಿ.ಮೀ. ವರೆಗೆ ಮಳೆಯಾಗುತ್ತದೆ.

### ಕೃಷಿ ಕಾರ್ಯಕ್ರಮಗಳ ಬಗ್ಗೆ ಅನುಸರಿಸಬೇಕಾದ ವಿವರ

| ಬೆಳೆಗಳು | ಹವಾಮಾನ ಆಧಾರಿತ ಕೃಷಿ ಸಲಹೆಗಳು |
|---|---|
| **ಸಾಮಾನ್ಯ** | ➢ ಕೋವಿಡ್–19 ವೈರಾನುವಿನ ನಿಯಂತ್ರಣಕ್ಕಾಗಿ ರೈತರು ವ್ಯಕ್ತಿಯಿಂದ ವ್ಯಕ್ತಿಗೆ 3–4 ಅಡಿಗಳ ಅಂತರವನ್ನು ವಿಶ್ರಾಂತಿ ಸಮಯದಲ್ಲಿ, ಆಹಾರ ಸೇವನೆಯ ಸಂದರ್ಭದಲ್ಲಿ, ಕೃಷಿ ಉತ್ಪನ್ನಗಳನ್ನು ಸಂಗ್ರಹಿಸುವಾಗ, ಇಳಿಸುವಾಗ/ಹೊತ್ತೊಯ್ದು ಅಡಕಿಸುವಾಗ ಹೀಗೆ ಪ್ರತಿ ಹಂತದಲ್ಲೂ ಸುರಕ್ಷಿತಾ ದೃಷ್ಟಿಯಿಂದ ಸಾಮಾಜಿಕ ಅಂತರವನ್ನು ಕಾಯ್ದುಕೊಳ್ಳಬೇಕು. ಎಲ್ಲಾ ಕೃಷಿ |

| | |
|---|---|
| | ಪರಿಕಂಗಳ ಅಂಗಡಿಗಳು ತೆರೆದಿರುತ್ತವೆ. ಕೃಷಿಕರು ಈ ಅಂಗಡಿಗಳಲ್ಲಿ ಬೀಜ, ಗೊಬ್ಬರ ಮತ್ತು ರಾಸಾಯನಿಕಗಳನ್ನು ಕೊಳ್ಳುವಾಗ ಪರಸ್ಪರ 4 ಅಡಿಗಳ ಅಂತರವನ್ನು ಕಾಯ್ದುಕೊಳ್ಳಬೇಕು<br>➢ ಮುಂಬರುವ ಬಿತ್ತನೆಗೆ ಅಗತ್ಯವಿರುವ ಬಿತ್ತನೆ ಬೀಜಮಾದರಿಯನ್ನು ಬೀಜಪರೀಕ್ಷಾಲಯಕ್ಕೆ ಕಳುಹಿಸುವ ಮೂಲಕ ಮೊಳಕೆ ಪ್ರಮಾಣದ ಸಾಮರ್ಥ್ಯ ತಿಳಿದುಕೊಳ್ಳುವುದು.<br>➢ ಗಾಳಿಯ ವೇಗ ಹೆಚ್ಚಾಗಿರುವುದರಿಂದ ಬಾಳೆ ಮತ್ತು ತರಕಾರಿ ಬೆಳೆಗಳಿಗೆ ರಕ್ಷಣೆ ಕ್ರಮಗಳನ್ನು ಅನುಸರಿಸಿ.<br>➢ ಮಳೆಯ ಏರುಪೇರಿಗೆ ಸುಸ್ಥಿರ ಆದಾಯಕೋಸ್ಕರ ಜಮೀನಿನ ಬದುಗಳ ಮೇಲೆ ಹೆಬ್ಬೇವು, ಸಿಲ್ವರ್ ಓಕ್ ಮತ್ತು ಸರ್ವೆ ಮರಗಳನ್ನು ನೆಡುವುದು ಸೂಕ್ತ.<br>➢ ಮಳೆಯ ಏರುಪೇರಿಗೆ ಸುಸ್ಥಿರ ಆದಾಯಕೋಸ್ಕರ ಜಮೀನಿನ ಬದುಗಳ ಮೇಲೆ/ಸುತ್ತಲು ಮಾವು(ಮಲ್ಲಿಕ ಮತ್ತು ಬಾದಾಮಿ ಕಸಿ ಗಿಡ) ಬೆಳೆಯುವುದು ಸೂಕ್ತ.<br>➢ ಎರಡು ಬೆಳೆ ಪದ್ದತಿಗಳು: ಆಳವಾದ ಮಣ್ಣನ್ನು ಹೊಂದಿರುವ ಹಾಗೂ 5–6 ತಿಂಗಳುದ್ದಕ್ಕೂ ಮಳೆ ಸಮನಾಗಿ ಬೀಳುವ ಪ್ರದೇಶಗಳಲ್ಲಿ ಎರಡು ಬೆಳೆ ಪದ್ಧತಿಯನ್ನು ಅನುಸರಿಸಬಹುದು.<br>➢ ಎರಡು ಬೆಳೆ ಪದ್ಧತಿ ಅನುಸರಿಸುವ ರೈತರುಸದಾ ಜಾಗರೂಕರಾಗಿ, ಬೀಳುವ ಮಳೆಯನ್ನು ಸಂರಕ್ಷಣೆ ಮಾಡಿಕೊಂಡು ಹೆಚ್ಚಿನ ಖರ್ಚು ಭರಿಸಲು ಸಿದ್ಧವಿದ್ದಲ್ಲಿ ವರ್ಷದಲ್ಲಿ ಎರಡು ಬೆಳೆಗಳನ್ನು ಖುಷ್ಕಿ ಪ್ರದೇಶದಲ್ಲಿಯೂ ತೆಗೆದುಕೊಳ್ಳಲು ಸಾಧ್ಯ.<br>➢ **ಏಕಬೆಳೆ ಪದ್ದತಿಯಲ್ಲಿ ಈ ಕೆಳಗಿನ ದೀರ್ಘಾವಧಿ ತಳಿಗಳನ್ನು ಬಿತ್ತನೆ ಮಾಡಲು ಸೂಚಿಸಲಾಗಿದೆ**<br>ತೊಗರಿ : ಟಿ.ಟಿ.ಬಿ–7, ಬಿ.ಆರ್.ಜಿ–1,2,4ಮತ್ತು 5<br>ಹರಳು: ಡಿ.ಸಿ.ಎಸ್–9 (ಜ್ಯೋತಿ), ಡಿ.ಸಿ.ಎಚ್–177 ಮತ್ತು 32<br>ಮುಸುಕಿನ ಜೋಳ: ಗಂಗಾ–11, ಡೆಕ್ಕನ್–103, ವಿಜಯ ಕಾಂಪೋಸಿಟ್, ಕಾಂಪೋಸಿಟ್ ಎನ್.ಎ.ಸಿ–6004,6002, ನಿತ್ಯಶ್ರೀ–ಸಂಕರಣ ತಳಿ.<br>➢ **ಎರಡುಬೆಳೆ ಪದ್ದತಿಯಲ್ಲಿ ಈ ಕೆಳಗಿನ ಮಧ್ಯಮಾವಧಿ ಮತ್ತು ಕಡಿಮೆ ಅವಧಿ ತಳಿಗಳನ್ನು ಬಿತ್ತನೆ ಮಾಡಲು ಸೂಚಿಸಲಾಗಿದೆ**<br>ನೆಲಗಡಲೆ: ಟಿ.ಎಂ.ವಿ–2, ಜೆ.ಎಲ್–24 ಮತ್ತು ಕೆ.ಸಿ.ಜಿ–6<br>ಅಲಸಂದೆ : ಟಿ.ವಿ.ಎಕ್ಸ್–944, ಕೆ.ಬಿ.ಸಿ–1<br>ಹೆಸರು :ಪಿ.ಎಸ್–16, ಪಿ.ಡಿ.ಎಮ್–84, 178 , ಉದ್ದು: ಕರಗಾವ್–3, ಟಿ–9, ರಶ್ಮಿ<br>➢ ತೊಗರಿ ಬಿತ್ತನೆಗೆ ಮುಂಚೆ ಬೀಜೋಪಚಾರ ಮಾಡುವುದು ಉತ್ತಮ, ಕಾರ್ಬೆನ್‌ಡೈಜಿಮ್ ಅಥವಾ ಥೈರಾಮ್ @ 2 ಗ್ರಾಂ/ ಪ್ರತಿ ಕೆ.ಜಿ ಬೀಜಕ್ಕೆ ಉಪಚರಿಸಿ, ಮತ್ತು ಜೈವಿಕ ಕೀಟನಾಶಕಗಳಾದ ಟ್ರೈಕೋಡರ್ಮ ವಿರಿಡೆ @ 4 ಗ್ರಾಂ/ ಪ್ರತಿ ಕೆ.ಜಿ ಬೀಜಕ್ಕೆ ಅಥವಾ ಸುಡೋಮೋನಾಸ್ ಫ್ಲುರೆಸೆನ್ಸ್ @ 10 ಗ್ರಾಂ/ ಪ್ರತಿ ಕೆ.ಜಿ ಬೀಜಕ್ಕೆ ಮತ್ತು ರೈಜೋಬಿಯಂ @ 10 ಗ್ರಾಂ/ ಪ್ರತಿ ಕೆ.ಜಿ ಬೀಜಕ್ಕೆ ಬೆರೆಸಿ ಉಪಚರಿಸಿ. |
| **ಮಾವು** | ➢ ಹಣ್ಣನ್ನು ಕಟಾವು ಮಾಡುವ ಸಮಯದಲ್ಲಿ ನೆಲಕ್ಕೆ ತಾಗದ ರೀತಿ ಎಚ್ಚರ ವಹಿಸಿ. ಇದರಿಂದ ಕಟಾವಿನ ನಂತರ ಶಿಲೀಂಧ್ರದಿಂದ ಬರುವ ಹಲವಾರು ರೋಗಗಳನ್ನು ತಡೆಯಬಹುದು.<br>➢ ಮಾವು ಬೆಳೆಗಾರರು ಚೆನ್ನಾಗಿ ಬಲಿತು ಕಟಾವಿಗೆ ಬಂದಿರುವ ಮಾವಿನ ಕಾಯಿಯನ್ನು ಕಟಾವು ಮಾಡುವಾಗ ಒಂದು ಇಂಚು ತೊಟ್ಟನ್ನು ಬಿಟ್ಟು ಕಟಾವು ಮಾಡಬೇಕು. ನಂತರ ಮಾವಿನ ಕಾಯಿಗಳನ್ನು ಪ್ಲಾಸ್ಟಿಕ್ ಕ್ರೇಟಿನಲ್ಲಿ ಪೇಪರ್ ಹಾಕಿ ಜೋಡಿಸಬೇಕು.<br>➢ ಮಾವಿನಲ್ಲಿ ಒತ್ತಾಗಿ ಬೆಳೆದಿರುವ ರೆಂಬೆಗಳನ್ನು ಕತ್ತರಿಸಬೇಕು ಇದರಿಂದ ಸೂರ್ಯನ ಬೆಳಕು ಒಳಬಾಗಕ್ಕೆ ಬೀಳುತ್ತದೆ ಇದರಿಂದ ಒಳಭಾಗದಲ್ಲೂ ಮುಂದಿನ ಬಾರಿ ಹೂ ಮತ್ತು ಕಾಯಿ ಕಚ್ಚುತ್ತವೆ.<br>➢ ಗಿಡಗಳ ಸುತ್ತಲು ಪಾತಿ ಮಾಡಿ, ಶಿಫಾರಸ್ಸು ಮಾಡಿದ ಗೊಬ್ಬರಗಳನ್ನು ಮಳೆಗಾಲ(ಜೂನ್–ಜುಲೈ) ದಲ್ಲಿ ಒದಗಿಸಬೇಕು. ಕಳೆ ನಿರ್ವಹಣೆಗೆ ಮತ್ತು ಭೂಮಿಯಲ್ಲಿನ ತೇವಾಂಶವನ್ನು ಸಂರಕ್ಷಿಸಲು ಅಂತರ ಬೇಸಾಯ ಮಾಡಬೇಕು. |
| | **ಹೈನುಗಾರಿಕೆ** |
| **ಪಶುಸಂಗೋಪನೆ** | ➢ **ಗಂಟಲು ಬೇನೆ:** ಪ್ರತಿ ವರ್ಷವೂ ಈ ರೋಗ ಮುಂಗಾರು ಮಳೆ ಪ್ರಾರಂಭದಲ್ಲಿ ( ಜೂನ್ ಮತ್ತು ಜುಲೈ) ಉಲ್ಬಣವಾಗುವುದರಿಂದ ಗಂಟಲು ಬೇನೆ ಲಸಿಕೆಯನ್ನು ಮೇ ತಿಂಗಳಿನಲ್ಲಿ ಮಾಡಿಸುವುದು.<br>➢ **ಚಪ್ಪೆ ರೋಗ :** ಈ ರೋಗವು ಬ್ಯಾಕ್ಟೀರಿಯಾದಿಂದ ಹರಡುತ್ತದೆ.<br>ಈ ರೋಗವು ದನ, ಎಮ್ಮೆ, ಕುರಿಗಳಲ್ಲಿ ಹರಡುತ್ತದೆ. ಸಾಮಾನ್ಯವಾಗಿ ಈ ರೋಗವು ಮಳೆಗಾಲದ ಕೊನೆಯಲ್ಲಿ ಕಾಣುತ್ತದೆ. ಚಪ್ಪೆ ರೋಗದ ಲಸಿಕೆಯನ್ನು ಪ್ರತಿ ವರ್ಷವೂ ಜೂನ್/ಜುಲೈ ತಿಂಗಳಲ್ಲಿ ಮಾಡಿಸುವುದು. |

**ನೋಡಲ್ ಅಧಿಕಾರಿ:**
ಕೃಷಿ ಹವಾಮಾನ ವಿಭಾಗ
**ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು**

**ಮೊಬೈಲ್ ಆಪ್:**

➢ ರೈತರು "ದಾಮಿನಿ" ಎಂಬ ತಂತ್ರಾಂಶವನ್ನು ಗೂಗಲ್ ಪ್ಲೇ ಸ್ಟೋರ್‌ನಿಂದ ಡೌನ್ ಲೋಡ್ ಮಾಡಿಕೊಂಡರೆ ಇದರಿಂದ ಮಿಂಚಿನ ಮುನ್ಸೂಚನೆಯನ್ನು ಅತ್ಯಂತ ನಿಖರವಾಗಿ ತಿಳಿಯಬಹುದು.

- ಹಾಗೆಯೇ "ಮೌಸಮ್" ಮತ್ತು "ಮೇಘದೂತ್" ತಂತ್ರಾಂಶಗಳಿಂದ ಮಳೆಯ ಮುನ್ಸೂಚನೆ ಮತ್ತು ಕೃಷಿ ಸಲಹೆಗಳನ್ನು ಪಡೆಯಲು ಸೂಚಿಸಲಾಗಿದೆ.

ಹೆಚ್ಚಿನ ಮಾಹಿತಿಗೆ *mausam.imd.gov.in* ಜಾಲತಾಣದಲ್ಲಿ ಮಾಹಿತಿ ಪಡೆಯಿರಿ.